ಆಗಾಗ ಹೋಗಿಬರುತ್ತಿರುತ್ತೀಯೆ. ಅವರು ನಮ್ಮ ಮನೆಗೆ, ಈ ನಮ್ಮ ಮಂದಳ್ಳೀ ಊರಿಗೆ ಯಾವೊತ್ತಾದರೂ ಬಂದಿದ್ದಾರಾ?' ಒಮ್ಮೆ ಚಿಕ್ಕಮ್ಮನನ್ನು ನಾನು ಕೇಳಿದ್ದೆ.

'ಅವರೇಕೆ ನಮ್ಮ ಮನೆಗೆ ಬರುತ್ತಾರೆ? ಈ ಮಂದಳ್ಳಿಗೆ ಬರುತ್ತಾರೆ? ವಳಗೆರೆಯ ಅವರ ಮನೆ ದೇವರ ಗುಡಿ. ಆ ಮನೆಯ ದೇವರು ಅವರು. ದೇವರನ್ನು ನೋಡಲು ನಾವೇ ಹೋಗಬೇಕೇ ಹೊರತು ದೇವರು ಎಂದಾದರೂ ನಮ್ಮ ಬಳಿ ಬಂದಾನಾ?' ಮರುತ್ತರ ಬಂದಿತ್ತು ಚಿಕ್ಕಮ್ಮನಿಂದ.

ದೇವರ ಗುಡಿಯಲ್ಲಿರುವ ಈ ಭಾಸ್ಕರರಾಯರನ್ನು ದೇವರೆಂದು ಭಾವಿಸಿರುವ ಈ ಭಾಸ್ಕರರಾಯರನ್ನು ಕಾಣಲು, ಕಂಡು ಮಾತನ್ನಾಡಲು ಬಂದ ಚಿಕ್ಕಮ್ಮ ಅವರ ಕೋಣೆಗೆ ಹೋಗಿ ಇಷ್ಟು ಹೊತ್ತಾದರೂ ಮರಳಿ ಬರಲಿಲ್ಲ... ಅದೆಂಥಾ ಮಾತುಕತೆ ಇರಬಹುದು ಚಿಕ್ಕಮ್ಮನದು ಅವರ ಬಳಿ?

ಕುಂತು ಕುಂತು ಬೇಸರವಾಗಿತ್ತು ನನಗೆ.

ಮೆಲ್ಲನೆ ಮೇಲೆದ್ದೆ.

ಜಗುಲಿಯನ್ನು ಸುಮ್ಮನೆ ಸುತ್ತಿದೆ.

ಮನೆಯಲ್ಲಿ ಮತ್ತೆ ಯಾರೊಬ್ಬರ ಸುಳಿವೂ ಇರಲಿಲ್ಲ. ಈ ಭೂತದಂಥಾ ಮನೆಯಲ್ಲಿ ಭಾಸ್ಕರರಾಯರು ಒಬ್ಬರೇ ಇರುತ್ತಾರಾ? ಎನ್ನುವ ಪ್ರಶ್ನೆ ನನ್ನಲ್ಲಿ ಮೂಡಿತ್ತು. ಮರಳಿ ಮನೆಗೆ ಹೋಗುವಾಗ ಹಾದಿಯಲ್ಲಿ ಚಿಕ್ಕಮ್ಮನನ್ನು ಕೇಳಬೇಕು ಎಂದುಕೊಂಡೆ.

ಬೆಕ್ಕಿನ ಮರಿಯೊಂದು 'ಮಿಯಾಂವ್...' ಎನ್ನುತ್ತಾ ಒಳಗಿನಿಂದ ಬಂದಿತ್ತು. ಸದ್ಯ... ಮನೆಯಲ್ಲಿ ಬೇರೆ ನರ ಮನುಷ್ಯರು ಇಲ್ಲದಿದ್ದರೂ ಇದೊಂದು ಮಿಯಾಂವ್ ಇದೆಯಲ್ಲಾ ಎನ್ನಿಸಿ 'ಚು... ಚು... ಮಿಯಾಂವ್...' ಎಂದು ಬಳಿ ಕರೆದೆ.

ಬೆಕ್ಕಿನ ಮರಿ ನನ್ನ ಬಳಿ ಬಂದಿತ್ತು. ನನ್ನ ಕಾಲು ಮೂಸಿತ್ತು.

ಕೆಲ ಹೊತ್ತು ಬೆಕ್ಕಿನ ಮರಿಯೊಡನೆ ಆಟವಾಡಿದ್ದೆ ನಾನು.

ನನ್ನ ಆಟ ಸಾಕೆಂದೋ, ತನ್ನ ತಾಯಿಯ ನೆನಪಾಗಿಯೋ ಆ ಬೆಕ್ಕಿನ ಮರಿ 'ಮಿಯಾಂವ್' ಎನ್ನುತ್ತಾ ತಾನು ಬಂದ ದಾರಿಯಲ್ಲಿ ಪುನಃ ಮರಳಿ ಹೋಗಿತ್ತು.

ಮತ್ತೆ ಕೆಲಹೊತ್ತು ಸರಿದಿತ್ತು.

ಇಲ್ಲಾ... ರಾಯರ ಕೋಣೆಯೊಳಗೆ ಹೋಗಿದ್ದ ಚಿಕ್ಕಮ್ಮ ಮರಳಿ ಬಂದಿರಲಿಲ್ಲ.

ಚಿಕ್ಕಮ್ಮ ಒಳ ಹೋಗಿದ್ದ ಕೋಣೆಯ ಬಾಗಿಲ ಬಳಿ ಹೋದೆ ನಿಧಾನವಾಗಿ. ಕೋಣೆಯ ಬಾಗಿಲು ಹಾಕಿತ್ತು.

ಒಳಗಿನಿಂದ ಬಳೆಗಳ ಸಪ್ಪಳ ಕೇಳಿಸುತ್ತಿತ್ತು. ಒಂದೆರಡು ಕ್ಷಣ ಬಾಗಿಲ ಹೊರಗೇ ನಿಂತಿದ್ದೆ.

'ಇಲ್ಲಿಯೇ ನಿಂತಿದ್ದರೆ ಚಿಕ್ಕಮ್ಮ ಬಾಗಿಲು ತೆರೆದು ಹೊರಬಂದು ಇಲ್ಲಿ ನಿಂತಿರುವ ನನ್ನನ್ನು ಕಂಡು ಬಯ್ದರೆ' ಎನ್ನಿಸಿತು.

ಮರಳಿ ಬಂದು ಮತ್ತೆ ಕುರ್ಚಿಯಲ್ಲಿ ಕುಳಿತಿದ್ದೆ.

ಅದೆಷ್ಟು ಸಮಯ ಸಂದಿತ್ತೋ ನನಗೆ ತಿಳಿಯದು: ನನಗೆ ಜೊಂಪು ಬಂದಿತ್ತು.'ಏಳು ಪುಟ್ಟಾ... ಮನೆಗೆ ಹೋಗೋಣ' ಎಂದು ಚಿಕ್ಕಮ್ಮ ನನ್ನ ಭುಜ ಅಲುಗಿಸಿ ಹೇಳಿದಾಗಲೇ ನನಗೆ ಎಚ್ಚರವಾದದ್ದು.

'ಅದೇನು ಅಷ್ಟು ಹೊತ್ತು ರಾಯರ ಜೊತೆ ನಿನ್ನ ಮಾತುಕತೆ?' ಎಂದು ಕೇಳಬೇಕು ಚಿಕ್ಕಮ್ಮನನ್ನು ಎನ್ನಿಸಿತು. ಆದರೆ, ಹಾದಿಯ ಹೊಲಸನ್ನು ಕಂಡು, ಅದನ್ನು ತುಳಿಯದೆ, ತೀರಾ